# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 271 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 09-12-2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯು ತೀರಾ ಹದಗೆಟ್ಟಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿವರ ಒದಗಿಸುವುದು) | ಮಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳಡಿ ಕ್ರಮ ಕೈಗೊಂಡಿರುತ್ತದೆ;<br>• ಮಂಗಳೂರು ನಗರದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿ (KIUWMIP) ಯೋಜನೆಯಡಿ 8 ಒಳಚರಂಡಿ ಕಾಮಗಾರಿಗಳನ್ನು ರೂ 316.49 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br>• 15ನೇ ಹಣಕಾಸು ಯೋಜನೆಯಡಿಯಲ್ಲಿ ಕಂಡತ್ ಪಳ್ಳಿ ವೆಟ್‌ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>• ಜಲ್ ಹಿ ಅಮೃತ್ ಯೋಜನೆಯಡಿಯಲ್ಲಿ STPಗಳ ಉನ್ನತೀಕರಣ ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ |
| ಆ) | ಮಂಗಳೂರು ನಗರದಲ್ಲಿ ಒಳಚರಂಡಿ ಅವ್ಯವಸ್ಥೆಯಿಂದ ಎಲ್ಲಾ ಬಾವಿಗಳ ನೀರು ಕಲುಷಿತಗೊಂಡಿದ್ದು. ಈ ಬಗ್ಗೆ ಕೈಗೊಂಡಿರುವ ಕ್ರಮವೇನು; ಒಳಚರಂಡಿ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರದ ಮುಂದಿನ ಯೋಜನೆಗಳು ಯಾವುವು: Smart City ಯೋಜನೆಯಿಂದ ಕೈಗೊಂಡಿರುವ ಕ್ರಮವೇನು; (ವಿವರ ಒದಗಿಸುವುದು) | ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ರೂ.41.14 ಕೋಟಿ ಮೊತ್ತದಲ್ಲಿ ಕೈಗೊಂಡಿದ್ದ ಒಳ ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕಾಮಗಾರಿಯಲ್ಲಿ 39 ಕಿ.ಮೀ ಉದ್ದದ Lateral Line ಕೊಳವೆಗಳನ್ನು ಅಳವಡಿಸಲಾಗಿದ್ದು, 1,782 ಆಳಗುಂಡಿಗಳನ್ನು ನಿರ್ಮಿಸಲಾಗಿದೆ ಹಾಗೂ 5160 ಮನೆ/ವಾಣಿಜ್ಯ ಮಳಿಗೆಗಳಿಗೆ ಒಳಚರಂಡಿ ಕೊಳವೆಗಳ ಸಂಪರ್ಕಗಳನ್ನು ಕೂಡ ಒದಗಿಸಲಾಗಿದೆ. |



Scanned with OKEN Scanner

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು 24x7 ನೀಡಲು ಇಲಾಖೆಯ ಮುಂದಿರುವ ಯೋಜನೆಗಳು ಯಾವುವು: ಪ್ರಸ್ತುತ ನೀರಿನ ದರವೆಷ್ಟು? (ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕ್ವಿಮಿಪ್ ಯೋಜನೆಯಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ ಮತ್ತು ಸ್ಮಾರ್ಟ್ ಸಿಟಿ ಡೆಪಾಸಿಟ್ ಕಾಂಟ್ರಿಬ್ಯೂಷನ್ ಅಡಿ (ಪರಿಷ್ಕೃತ ಗುತ್ತಿಗೆ ಮೊತ್ತ ರೂ.617.22 ಕೋಟಿ) 24x7 ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ವಿತರಣಾ ಜಾಲ ಕಾಮಗಾರಿಯು ದಿನಾಂಕ:24.12.2019 ರಿಂದ ಹಾಗೂ ಅಡ್ಯಾರ್ ಬಳಿ ಹೊಸ 125 ಎಂ.ಎಲ್.ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ಸರ್ಕಾರದ ಆದೇಶದ ದಿನಾಂಕ: 02.01.2024ರ ಅನುಸಾರ ದಿನಾಂಕ: 11.01.2024 ರಿಂದ ಪ್ರಾರಂಭಿಸಿದ್ದು, ಪ್ರಸ್ತುತ ಶೇ.61.10 ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿರುತ್ತದೆ.<br><br>ಮಂಗಳೂರು ನಗರದಲ್ಲಿ ನಿಗಧಿತ ಒತ್ತಡದಲ್ಲಿ ಸುಗಮ ನೀರು ಸರಬರಾಜು ಒದಗಿಸಲು 53 ವಲಯಗಳಾಗಿ ವಿಂಗಡಿಸಲಾಗಿದ್ದು, ಸಗಟು ನೀರಿನ ಲಭ್ಯತೆಯನುಗುಣವಾಗಿ ಹಂತ ಹಂತವಾಗಿ ನೀರು ಸರಬರಾಜು ವ್ಯವಸ್ಥೆಯನ್ನು ಚಾಲನೆಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಈ ಯೋಜನೆಯನ್ನು ಡಿಸೆಂಬರ್-2026 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಠರಾವು ಸಂಖ್ಯೆ: 46/2022-23, ದಿನಾಂಕ:31-05-2022 ರಂತೆ ಪ್ರತಿ ತಿಂಗಳಿಗೆ ನಿರ್ಣಯಿಸಿದ ಗೃಹ ಬಳಕೆ ನೀರಿನ ದರವು ಈ ಕೆಳಕಂಡಂತಿರುತ್ತದೆ.<br><br>
<table>
<tr><th colspan="2">ದರದ ಹಂತ ಕಿ.ಲೀ.ನಲ್ಲಿ</th><th>ಬಳಕೆಯ ದರ</th></tr>
<tr><td>ಕನಿಷ್ಠ</td><td>ಗರಿಷ್ಠ</td><td>ರೂ/ಕಿ.ಲೀ</td></tr>
<tr><td>0</td><td>20 ಕಿ.ಲೀ</td><td>5.00</td></tr>
<tr><td>20. ಕಿ.ಲೀ</td><td>25 ಕಿ. ಲೀ</td><td>11.00</td></tr>
<tr><td>25 ಕಿ.ಲೀ ಕ್ಕಿಂತ</td><td>ಅಧಿಕ</td><td>14.00</td></tr>
<tr><td>ಮಾಸಿಕ</td><td>ಕನಿಷ್ಟ</td><td>ರೂ.100.00</td></tr>
</table>
</td></tr>
</table>



Scanned with OKEN Scanner

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 1. ಗೃಹಯೇತರ ಬಳಕೆ (ಅನಿವಾಸಿ) ಪರಿಷ್ಕೃತ ದರ- ಮಾಸಿಕ ಕನಿಷ್ಟ ರೂ.360.00 (18,000 ಕಿ.ಲೀ ವರೆಗೆ) ತದನಂತರ ಪ್ರತೀ ಕಿ.ಲೀ ರೂ.26.00 ರಂತೆ<br>2. ವಾಣಿಜ್ಯ/ಕೈಗಾರಿಕೆ ಬಳಕೆ ಪರಿಷ್ಕೃತ ದರ- ಮಾಸಿಕ ಕನಿಷ್ಟ ರೂ.360.00 (18000 ಕಿ.ಲೀ ವರೆಗೆ) ತದನಂತರ ಪ್ರತೀ ಕಿ.ಲೀ ರೂ.60 ರಂತೆ<br>3. ಕಟ್ಟಡ ರಚನೆ ಪರಿಷ್ಕೃತ ದರ- ಮಾಸಿಕ ಕನಿಷ್ಟ ರೂ.1200.00 (20 ಕಿ.ಲೀ ವರೆಗೆ) ತದನಂತರ ಪ್ರತೀ ಕಿ.ಲೀ ರೂ.60.00 ರಂತೆ. |

ಕಡತ ಸಂಖ್ಯೆ:ನಅಇ 212 ಪಿಆರ್‌ಜೆ 2025

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು



Scanned with OKEN Scanner

ಅನುಬಂಧ-1- ಮಂಗಳೂರು ನಗರದಲ್ಲಿ ಕ್ವಿಮಿಪ್ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ವಿವರಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| 1 | ಪಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | 84.56 | ಪೈಪ್ ಲೈನ್-11 ಕಿ.ಮೀ | 100 | 84.50 | ಕಾಮಗಾರಿಯು ಪೂರ್ಣಗೊಂಡಿದೆ |
| 2 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | 22.40 | ಪೈಪ್ ಲೈನ್-13.92 ಕಿ.ಮೀ, ಮೆಷಿನ್ ಹೋಲ್-512 ಸಂಖ್ಯೆ ಇನ್ಸ್ಪೆಕ್ಷನ್ ಚೆಂಬರ್-34 ಸಂಖ್ಯೆ | 100 | 22.40 | ಕಾಮಗಾರಿಯು ಪೂರ್ಣಗೊಂಡಿದೆ |
| 3 | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 23.56 | ಪೈಪ್ ಲೈನ್-17.72 ಕಿ.ಮೀ, ಮೆಷಿನ್ ಹೋಲ್-656 ಸಂಖ್ಯೆ ಇನ್ಸ್ಪೆಕ್ಷನ್ ಚೆಂಬರ್-296 ಸಂಖ್ಯೆ | 100 | 23.59 | ಕಾಮಗಾರಿಯು ಪೂರ್ಣಗೊಂಡಿದೆ |
| 4 | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 77.59 | ಪೈಪ್ ಲೈನ್-27.40 ಕಿ.ಮೀ, ಮೆಷಿನ್ ಹೋಲ್ -1569 ಸಂಖ್ಯೆ ರಿಟೇನಿಂಗ್ ವಾಲ್-2.98 ಕಿ.ಮೀ | 100 | 77.90 | ಕಾಮಗಾರಿಯು ಪೂರ್ಣಗೊಂಡಿದೆ |
| 5 | ಮಂಗಳೂರು ನಗರದ ವಲಯ 3 & 5 ರ uncovered area ದಲ್ಲಿ ಒಳಚರಂಡಿ ಕಾಮಗಾರಿ | 19.05 | ಪೈಪ್ ಲೈನ್-11.89 ಕಿ.ಮೀ, ಮೆಷಿನ್ ಹೋಲ್ -490ಸಂಖ್ಯೆ, ಇನ್ಸ್ಪೆಕ್ಷನ್ ಚೆಂಬರ್-12 ಸಂಖ್ಯೆ | 100 | 18.24 | ಕಾಮಗಾರಿಯು ಪೂರ್ಣಗೊಂಡಿದೆ |

Scanned with OKEN Scanner

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| 6 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4 &7) | 30.59 | ಪೈಪ್ ಲೈನ್-6 ಕಿ.ಮೀ, ಮೆಷಿನ್ ಹೋಲ್ -272ಸಂಖ್ಯೆ, ಇನ್ಸ್ಪೆಕ್ಷನ್ ಚೆಂಬರ್-5 ಸಂಖ್ಯೆ | 80.20 | 23.35 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 7 | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) | 22.65 | ಪೈಪ್ ಲೈನ್-7.96ಕಿ.ಮೀ, ಮೆಷಿನ್ ಹೋಲ್ -398ಸಂಖ್ಯೆ, ಇನ್ಸ್ಪೆಕ್ಷನ್ ಚೆಂಬರ್-4 ಸಂಖ್ಯೆ | 93 | 20.26 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 8 | ಮಂಗಳೂರು ನಗರದ ವಲಯ 5 ರ MSEZ R & R colony ದಲ್ಲಿ ಒಳಚರಂಡಿ ಕಾಮಗಾರಿ | 15.63 | ಪೈಪ್ ಲೈನ್-3.23 ಕಿ.ಮೀ, ಮೆಷಿನ್ ಹೋಲ್ -4ಸಂಖ್ಯೆ, ವೆಟ್ ವೆಲ್-3 ಸಂಖ್ಯೆ 1.5 MLD ತ್ಯಾಜ್ಯ ನೀರು ಸಂಸ್ಕರಣಾ ಘಟಕ | 100 | 9.68 | ಕಾಮಗಾರಿಯು ಪೂರ್ಣಗೊಂಡಿದೆ (ಪ್ರಾಯೋಗಿಕ ಕಾರ್ಯಾಚರಣೆ ಹಂತದಲ್ಲಿದೆ). |

Scanned with OKEN Scanner